## GOVERNMENT OF KARNATAKA

No: DPAR 9 PRJ 2020

Karnataka Government Secretariat,
M.S. Building,
Bangalore, Dated:31-12-2020

## CIRCULAR

**Subject:** Adoption of Metadata and Data Standardization (MDDS) in all IT systems/applications.

******

Under the National e-Governance Plan (NeGP), several initiatives have been taken for the growth of e-Governance in the country. The success of e-Governance systems needs seamless sharing and exchange of data among the e-Governance applications within/across different domains. For these applications to exchange data with unambiguous, shared meaning there is a need for:

- the precise meaning of exchanged information is understood across applications and
- standardization of commonly accepted data definitions and standardization of metadata for the various elements used in the e-Governance systems

The Data Governance Steering Committee in its first meeting directed that MDDS be adopted in all IT systems for smooth interaction and seamless sharing and exchange of data among systems / applications. Accordingly, as per the Data Governance directions all IT systems / applications including mobile applications managed by all Government Departments, Boards Corporations, Societies, Government Autonomous Organizations, Universities, Panchayat Raj Institutions, Municipal Corporations, Local Bodies etc. must mandatorily adopt the MDDS standards available in egovstandards.gov.in/mdds-demographic-ver-11. While all new IT systems / applications should mandatorily incorporate MDDS standards in their design, all old / existing IT systems / applications should gradually incorporate MDDS standards.

By order and in the name of the,
Governor of Karnataka.

31/12

**(RAJEEV CHAWLA)**
Additional Chief Secretary to
Government Department of Personnel
and Administrative
Reforms (e-Governance)

To:

1. All the Additional Chief Secretary / Principal Secretary / Secretary to Government, Vidhana Soudha / Vikasa Soudha, M.S. Building, Bengaluru.
2. All the Heads of Department- through the concerned Additional Chief Secretary / Principal Secretary / Secretary to Government.

3. All Boards / Corporations/ Autonomous bodies - through the concerned Additional Chief Secretary / Principal Secretary / Secretary to Government
4. The Chief Executive Officer, Centre for e-Governance, M.S. Building, Bengaluru
5. All the Deputy Commissioners / Chief Executive Officers, Zilla Panchayat- through the Chief Executive Officer, Centre for e-Governance.
6. The Private Secretary to Additional Chief Secretary to Government, Department of Personnel and Administrative Reforms (e-Governance).
7. The Personal Assistant to Additional Secretary to Government, Department of Personnel and Administrative Reforms (e-Governance).
8. For publication in Departmental website.
9. Section guard file.

# ಕರ್ನಾಟಕ ಸರ್ಕಾರ

ಸಂಖ್ಯೆ : ಸಿಆಸುಇ 9 ಪಿಎಲ್‌ಆರ್‌ಜೆ 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ :31-12- 2020

## ಸುತ್ತೋಲೆ

ವಿಷಯ: ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಐ.ಟಿ.ವ್ಯವಸ್ಥೆ ಹಾಗೂ ಅಪ್ಲಿಕೇಶನ್‌ಗಳಲ್ಲಿ ಮೆಟಾಡೇಟಾ(Metadata) ಮತ್ತು ಡೇಟಾ ಸ್ಟ್ಯಾಂಡರ್ಡೈಸೇಶನ್ (Data Standardization (MDDS) )ನ್ನು ಅಳವಡಿಸುವ ಕುರಿತು.

******

ರಾಷ್ಟ್ರೀಯ ಇ-ಆಡಳಿತ ಯೋಜನೆ (NeGP) ಅಡಿಯಲ್ಲಿ ದೇಶದಲ್ಲಿ ಇ-ಆಡಳಿತ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇ-ಆಡಳಿತ ವ್ಯವಸ್ಥೆಯ ಸಫಲತೆಗೆ ಇ-ಆಡಳಿತದ ವಿವಿಧ ಅಪ್ಲಿಕೇಶನ್‌ಗಳ ಹಾಗೂ ವಿವಿಧ ಡೋಮೇನ್‌ಗಳ ಮಧ್ಯೆ ತಡೆಯಿಲ್ಲದ ಹಂಚಿಕೆ ಹಾಗೂ ಮಾಹಿತಿ ವಿನಿಮಯದ ಅಗತ್ಯವಿದೆ. ಸದರಿ ಅಪ್ಲಿಕೇಶನ್‌ಗಳ ಮಾಹಿತಿ ವಿನಿಮಯವು ದ್ವಂದ್ವರಹಿತ ಹಾಗೂ ನೈಜ ಹಂಚಿಕೆಯಾಗಬೇಕಾದಲ್ಲಿ,

- ವಿನಿಮಯವಾದ ಮಾಹಿತಿಯ ನಿಖರ ಅರ್ಥವು ಎಲ್ಲ ಅಪ್ಲಿಕೇಶನ್‌ಗಳ ನಡುವೆ ಸಮಾನವಾಗಿರಬೇಕು ಹಾಗೂ
- ಇ-ಆಡಳಿತ ವ್ಯವಸ್ಥೆಗಳಲ್ಲಿ ಸಾಮಾನ್ಯವಾಗಿ ಬಳಸುವ ವಿವಿಧ ದತ್ತಾಂಶಗಳು ಹಾಗೂ ಮೆಟಾಡೇಟಾಗಳ ವ್ಯಾಖ್ಯಾನಗಳ (Definitions) ಹಾಗೂ ನಮೂನೆಗಳ ಏಕರೂಪಗೊಳಿಸುವ (Standardisation) ಅವಶ್ಯಕತೆಯಿದೆ.

ದತ್ತಾಂಶ ಆಡಳಿತ ಚಾಲನಾ ಸಮಿತಿಯ ಪ್ರಥಮ ಸಭೆಯಲ್ಲಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಐ.ಟಿ.ವ್ಯವಸ್ಥೆಗಳಲ್ಲಿ (MDDS) ಅಳವಡಿಸುವ ಮೂಲಕ, ವಿವಿಧ ಐ.ಟಿ.ವ್ಯವಸ್ಥೆ ಹಾಗೂ ಅಪ್ಲಿಕೇಶನ್‌ಗಳ ಮಧ್ಯೆ ಸರಾಗ ವ್ಯವಹಾರ ಹಾಗೂ ತಡೆಯಿಲ್ಲದ ಸಂವಹನಕ್ಕೆ ಅವಕಾಶ ಕಲ್ಪಿಸುವಂತೆ ಸೂಚಿಸಲಾಗಿದೆ. ಅದರಂತೆ, ರಾಜ್ಯ ಸರ್ಕಾರದ ಎಲ್ಲಾ ಇಲಾಖೆ / ನಿಗಮ / ಮಂಡಳಿ / ಸೊಸೈಟಿ / ಸ್ವಾಯತ್ತ ಸಂಸ್ಥೆ / ವಿಶ್ವವಿದ್ಯಾಲಯಗಳು / ಪಂಚಾಯತರಾಜ್ ಸಂಸ್ಥೆಗಳು / ಪೌರಾಡಳಿತ ಸಂಸ್ಥೆಗಳು / ಸ್ಥಳೀಯ ಸಂಸ್ಥೆಗಳು ಇತ್ಯಾದಿ ಸಂಸ್ಥೆಗಳು ನಿರ್ವಹಿಸುತ್ತಿರುವ ಐ.ಟಿ.ವ್ಯವಸ್ಥೆಗಳು / ಅಪ್ಲಿಕೇಶನ್‌ಗಳು / ಮೊಬೈಲ್ ಆಪ್‌ಗಳು ಕಡ್ಡಾಯವಾಗಿ egovstandards.gov.in/mdds-demographic-ver-11 ರಲ್ಲಿ ಲಭ್ಯವಿರುವ MDDS standards ಗಳನ್ನು ಅಳವಡಿಸಿಕೊಳ್ಳುವಂತೆ ಸೂಚಿಸಿದೆ. ಮುಂದುವರೆದು, ಹೊಸದಾಗಿ ಸೃಜಿಸಲಾಗುವ ಐ.ಟಿ.ವ್ಯವಸ್ಥೆಗಳು / ಅಪ್ಲಿಕೇಶನ್‌ಗಳು / ಮೊಬೈಲ್ ಆಪ್‌ಗಳನ್ನು MDDS standards ಬಳಸಿ ಸೃಜಿಸುವಂತೆ ಹಾಗೂ ಚಾಲ್ತಿಯಲ್ಲಿರುವ ಐ.ಟಿ.ವ್ಯವಸ್ಥೆಗಳು / ಅಪ್ಲಿಕೇಶನ್‌ಗಳು / ಮೊಬೈಲ್ ಆಪ್‌ಗಳು ಕ್ರಮೇಣವಾಗಿ MDDS standards ಅಳವಡಿಸಿಕೊಳ್ಳುವಂತೆಯೂ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

4/1/

(ರಾಜೀವ್ ಚಾವ್ಲಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಆಸುಇ (ಇ-ಆಡಳಿತ)

ಇವರಿಗೆ:

1. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನಸೌಧ / ವಿಕಾಸಸೌಧ / ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ – ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ.

3. ಎಲ್ಲಾ ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು – ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಮುಖಾಂತರ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು
9. ಶಾಖಾ ರಕ್ಷ ಕಡತ.